ಎಂ.ವಿ.ಸಿ. ನಂಃ 2416/2024
ಆರ್.ಡಬ್ಲ್ಯೂ-1 (ರಿಷಿಕೇಶ)

ದಿನಾಂಕ: 17-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ.ವಿ.ವಿ.ಕೆ. 3ನೇ ಎದುರುದಾರ ಪರ ವಕೀಲರಿಂದಃ</u>**

ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿಯ ಸಂಗತಿಗಳು ಸತ್ಯವಾಗಿದ್ದು, ಅದಕ್ಕೆ ನಾನೇ ಸಹಿ ಮಾಡಿದ್ದೇನೆ.

ಅಧಿಕಾರ ಪತ್ರವನ್ನು ನಿಶಾನೆ ಆರ್-1, ವಿಮೆಯ ಪ್ರತಿಯನ್ನು ನಿಶಾನೆ ಆರ್-2, ಪ್ರಪೋಸಲ್ ಫಾರ್ಮ ನಿಶಾನೆ ಆರ್-3 ಎಂದು ಗುರುತಿಸಲಾಯಿತು. ಆದ್ದರಿಂದ ಈ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

**<u>ಪಾಟೀಸವಾಲುಃ ಶ್ರೀ.ಎ.ಕೆ.ಎ. ಅರ್ಜಿದಾರ ಪರ ವಕೀಲರಿಂದಃ</u>**

ಈ ಅಪಘಾತದ ಬಗ್ಗೆ ನನಗೆ ವೈಯಕ್ತಿಕವಾದ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನು ಪೊಲೀಸ ದಾಖಲೆಗಳ ಆಧಾರದ ಮೇಲೆ ಸಾಕ್ಷಿ ನುಡಿಯುತ್ತಿದ್ದೇನೆ. ಅಪಘಾತ ಆದ ಸ್ಥಳದ ನಕಾಶೆಯ ಪ್ರಕಾರ ಅಪಘಾತ ಆದ ಸ್ಥಳದಲ್ಲಿರುವ ರಸ್ತೆ ಕೇವಲ 09ಅಡಿ ಅಗಲ ಇದೆ ಎಂದರೆ ಸರಿಯಲ್ಲ. ಅರ್ಜಿದಾರರು ಮೋಟರ ಸೈಕಲ ಮೇಲೆ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದಾಗ ಎಡಭಾಗದ ಅಂಚಿನಿಂದ ಬಲಭಾಗದ 05ಅಡಿ ಒಳಗಡೆ ಈ ಅಪಘಾತ ಆಗಿದೆ ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ.

ಎಂ.ವಿ.ಸಿ. ನಂಃ 2416/2024
ಆರ್.ಡಬ್ಲ್ಯೂ-1 (ರಿಷಿಕೇಶ)

2. ಈ ಅಪಘಾತದಲ್ಲಿ ಒಳಗೊಂಡ ಎರಡೂ ವಾಹನಗಳಿಗೆ ಜಖಂ ಆಗಿದೆ ಎಂದರೆ ಸರಿ. ಅಪಘಾತ ಆದ ಸಮಯದಲ್ಲಿ ಮೋಟರ ಸೈಕಲ ನಂ.KA-23/EB-8385 ಕ್ಕೆ ನಮ್ಮ ಕಂಪನಿಯಿಂದ ಮಾಡಿಸಿದ ವಿಮೆ ಚಾಲ್ತಿಯಲ್ಲಿ ಇತ್ತು ಮತ್ತು ಸದರಿ ಮೋಟರ ಸೈಕಲ ಚಾಲಕನಿಗೆ ಚಾಲನಾ ಪತ್ರ ಇತ್ತು ಎಂದರೆ ಸರಿಯಲ್ಲ. ಸಾಕ್ಷಿದಾರರು ಈ ಅಪಘಾತ ಆದ ನಂತರ ವಿಮೆ ಮಾಡಿಸಿದ್ದಾರೆ ಎಂದು ಹೇಳುತ್ತಾರೆ. ಅರ್ಜಿದಾರರಿಗೆ ಪರಿಹಾರ ಕೊಡುವ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ವಾಹನದ ಮಾಲೀಕರು ಪ್ಯಾಕೇಜ್ ಪಾಲಿಸಿ ಖರೀದಿ ಮಾಡಿದಾಗ ನಾವು ವಾಹನವನ್ನು ಪರವೀಕ್ಷಣೆ ಮಾಡುತ್ತೇವೆ. Liability Policy ತೆಗೆದುಕೊಂಡಲ್ಲಿ ನಾವು ವಾಹನವನ್ನು ಪರವೀಕ್ಷಣೆ ಮಾಡುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನೂ ಮಾಹಿತಿ ಇರದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ